RNU AIR DHARWAD

NOVEMBER 10, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಇಂದು ವಿಶ್ವ ವಿಜ್ಞಾನ ದಿನಾಚರಣೆ. ವೈಜ್ಞಾನಿಕ ದತ್ತಾಂಶಗಳ ಆಧಾರದ ಮೇಲೆ ರೂಪಿತವಾದ, ಆಧುನಿಕ ಸಂಶೋಧನೆಗಳು, ಪ್ರಕೃತಿ ಮತ್ತು ವಿಜ್ಞಾನದ ನಡುವಿನ, ಬಾಂಧವ್ಯವನ್ನು ಬಲ ಪಡಿಸುತ್ತವೆ. ಕಾಡ್ಗಿಚ್ಚಿನ ಅಪಾಯ, ವನ್ಯಜೀವಿಗಳ ಆವಾಸಸ್ಥಾನ ರಕ್ಷಣೆ ಮತ್ತು ಕಳ್ಳ ಬೇಟೆಯಂತಹ ಅಪರಾಧ ತಡೆಯಲು, ತಂತ್ರಜ್ಞಾನ ಕೈ ದೀವಿಗೆ.

<><><>

ದೇಶದಲ್ಲಿ ಮೊದಲ ಬಾರಿಗೆ, ಕಾಮನ್‌ವೆಲ್ತ್ ಮಹಿಳಾ ಸಂಸದರ, ಭಾರತ ಪ್ರಾದೇಶಿಕ ಘಟಕದ, ವಿಶೇಷ ಸಮ್ಮೇಳನ, ಈ ತಿಂಗಳ 17 ಹಾಗೂ 18ನೇ ತಾರೀಖು, ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಆಯೋಜಿತವಾಗಿದೆ. ವಿಧಾನಸಭೆ ಸಭಾಧ್ಯಕ್ಷ, ಜಿ.ಎಸ್. ಪಾಟೀಲ ಹಾಗೂ ವಿಧಾನ ಪರಿಷತ್ತಿನ ಸಭಾಪತಿ, ಸಲೀಂ ಅಹ್ಮದ್, ವಿಧಾನಸೌಧದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ, ಈ ವಿಷಯ ತಿಳಿಸಿದರು. ಭಾರತದ ಸಂಸತ್ತು ಹಾಗೂ ಕರ್ನಾಟಕ ವಿಧಾನ ಮಂಡಲದ ಸಹಯೋಗದಲ್ಲಿ ಆಯೋಜಿತ, ಈ ಸಮ್ಮೇಳನದಲ್ಲಿ, ದೇಶದ ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಂದ, ಮಹಿಳಾ ಸಂಸದರು, ಮಹಿಳಾ ಸಭಾಧ್ಯಕ್ಷರು, ಉಪ ಸಭಾಧ್ಯಕ್ಷರು, ಶಾಸಕಿಯರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ, 150 ಜನ ಪ್ರತಿನಿಧಿಗಳು, ಭಾಗವಹಿಸುವ ನಿರೀಕ್ಷೆ ಇದೆ, ಎಂದರು. ಕಾಮನ್‌ವೆಲ್ತ್ ಸಂಸದೀಯ ಸಂಘದ, 9 ರಾಷ್ಟ್ರಗಳ ಮಹಿಳಾ ಪ್ರತಿನಿಧಿಗಳು, ಭಾಗವಹಿಸಲಿದ್ದಾರೆ.

<><><>

ಕಾಸರಗೋಡಿನ, ಬೇಕಲ ಗೋಕುಲಂ ಗೋಶಾಲೆಯಲ್ಲಿ, ಇಂದಿನಿಂದ 14 ದಿನಗಳ ಕಾಲ, 'ನಾದ ಗಾನ ಸಂಗೀತೋತ್ಸವ' ನಡೆಯಲಿದೆ. ದೇಸಿ ತಳಿ ಗೋವುಗಳ ಸಂರಕ್ಷಣೆ, ಭಾರತೀಯ ಕಲೆಗಳ ಪೋಷಣೆ ಹಾಗೂ ಅಧ್ಯಾತ್ಮದ ತ್ರಿವೇಣಿ ಸಂಗಮ, ಗೋಕುಲಂ ಗೋಶಾಲೆ, ವಿಶ್ವದ ಅತೀ ದೊಡ್ಡ ಸಂಗೀತೋತ್ಸವಕ್ಕೆ ವೇದಿಕೆಯಾಗಿದೆ. ಗೋಕುಲಂ ಗೋ ಶಾಲೆಯ ಸಂಸ್ಥಾಪಕ ವಿಷ್ಣುಪ್ರಸಾದ ಹೆಬ್ಬಾರ ರಚಿಸಿದ, ವಿದ್ವಾನ್ ವೆಲ್ಲಿ ಕೋತ್ ವಿಷ್ಣು ಭಟ್ ಸಂಗೀತ ಸಂಯೋಜಿಸಿದ, 10ಕ್ಕೂ ಹೆಚ್ಚು ಭಜನೆಗಳನ್ನು ನಾಗರತ್ನಾ ಹೆಬ್ಬಾರ ಹಾಗೂ ತಂಡ, ಪ್ರಸ್ತುತ ಪಡಿಸಿ, ದೀಪಾವಳಿ ಉತ್ಸವಕ್ಕೆ ಚಾಲನೆ ನೀಡಲಿದೆ.

<><><>

ದೀಪಾವಳಿ ಹಬ್ಬದ ಸಂದರ್ಭದಲ್ಲಿ, ವರ್ಷಕ್ಕೊಮ್ಮೆ ಮಾತ್ರ ಭಕ್ತರಿಗೆ ದರ್ಶನ ನೀಡುವ, ಹಾಸನದ ಅಧಿದೇವತೆ ಹಾಸನಾಂಬಾ ದೇವಿಯ ಗರ್ಭ ಗುಡಿಯ ಬಾಗಿಲನ್ನು, ನಾಳೆ ಮುಚ್ಚಲಾಗುತ್ತದೆ. ಕೊನೆಯ ದಿನ, ಸಾರ್ವಜನಿಕರ ದರ್ಶನಕ್ಕೆ ಅವಕಾಶವಿಲ್ಲ. ಇಂದೇ ದರ್ಶನಕ್ಕೆ ಕೊನೆಯ ದಿನವಾಗಿದ್ದು, ಈ ವರೆಗೆ, 27 ಲಕ್ಷ ಭಕ್ತಾದಿಗಳು ದರ್ಶನ ಪಡೆದಿದ್ದಾರೆ ಎಂದು, ಜಿಲ್ಲಾಡಳಿತ ತಿಳಿಸಿದೆ.

<><><>

ದೀಪಾವಳಿ ಹಬ್ಬದ ಸಂಭ್ರಮದ ಮಧ್ಯೆ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ, ಹುಬ್ಬಳ್ಳಿ ಕಚೇರಿ ಸ್ಫೋಟಿಸುವ ಬೆದರಿಕೆ ಇ–ಮೇಲ್, ಬಂದಿದೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಆಯುಕ್ತ, ಭೂಷಣ ಬೊರಸೆ ಮಾಹಿತಿ ನೀಡಿ, ಪಾಲಿಕೆಗೆ ಬಂದಿರುವ, ಇ–ಮೇಲ್ ಕುರಿತು, ಸೈಬರ್ ಅಪರಾಧಗಳ ಠಾಣೆಯಲ್ಲಿ, ಪ್ರಕರಣ ದಾಖಲಿಸಲಾಗುತ್ತಿದೆ. ಶ್ವಾನ ದಳ ಹಾಗೂ ಬಾಂಬ್ ಪತ್ತೆ ದಳದಿಂದ, ಪಾಲಿಕೆಯ ಎರಡೂ ಕಟ್ಟಡಗಳು ಮತ್ತು ನಗರದ ಪ್ರಮುಖ ಸ್ಥಳಗಳಲ್ಲಿ, ತಪಾಸಣೆ ನಡೆಸಲಾಗಿದೆ, ಎಂದರು.

<><><>

140 ವರ್ಷಗಳಷ್ಟು ಹಿರಿದಾದ, ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ರಾಜ್ಯೋತ್ಸವದ ಹಿನ್ನೆಲೆ, ಪರಿಸರ ಹಬ್ಬ ಆಯೋಜಿಸಿದ್ದು, ವನ್ಯಪ್ರಾಣಿ, ಪಕ್ಷಿಗಳು ಮತ್ತು ಪರಿಸರ ಛಾಯಾಚಿತ್ರ ಪ್ರದರ್ಶನವನ್ನು, ಈ ತಿಂಗಳ 15 ಮತ್ತು 16ನೇ ತಾರೀಖು, ಆಯೋಜಿಸಿದೆ. ಪ್ರದರ್ಶಿನಿ ಸಂಯೋಜಕರಾದ, ಹಿರಿಯ ಪಕ್ಷಿಮಿತ್ರ, ಆರ್.ಜಿ. ತಿಮ್ಮಾಪೂರ, ಮಾಹಿತಿ ನೀಡಿದ್ದಾರೆ.

<><><>

ಆರ್.ಜಿ. ತಿಮ್ಮಾಪೂರ ಧ್ವನಿ 29 ಸೆಕೆಂದುಗಳು

<><><>

ಪಟಾಕಿ ಸಿಡಿತದಿಂದ, ಕಣ್ಣಿಗೆ ಗಾಯಗೊಂಡು, ಬೆಂಗಳೂರಿನ ರಾಜಾಜಿನಗರದ, ನಾರಾಯಣ ನೇತ್ರಾಲಯಕ್ಕೆ, 41 ಜನ ಚಿಕಿತ್ಸೆಗಾಗಿ ದಾಖಲಾಗಿದ್ದಾರೆ. 18 ವ ರ್ಷಕ್ಕಿಂತ ಕಡಿಮೆ ವಯಸ್ಸಿನ, 24 ಮಕ್ಕಳು ಸೇರಿದ್ದಾರೆ. ಪಟಾಕಿ ಸಿಡಿಸುವ ಸಂದರ್ಭದಲ್ಲಿ ಸ್ವತಃ ಗಾಯಗೊಂಡವರು 29, ಪಕ್ಕದಲ್ಲಿ ನಿಂತು ವೀಕ್ಷಿಸುತ್ತಿದ್ದ 12 ಜನ ಕೂಡ ಗಾಯಗೊಂಡಿದ್ದಾರೆ ಎಂದು, ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

<><><>

ಧಾರವಾಡ ಜಿಲ್ಲೆ, ಹಳೇ ಹುಬ್ಬಳ್ಳಿಯ, ಬಹಾರಬಾಡದ ಸರ್ಕಾರಿ ಮಾದರಿ ಉರ್ದು ಮತ್ತು ಆಂಗ್ಲ ಮಾಧ್ಯಮ ಗಂಡು ಮಕ್ಕಳ ಶಾಲೆ ನಂಬರ್ 2, ಶತಮಾನೋತ್ಸವ ಸಂಭ್ರಮದಲ್ಲಿದೆ. ರಾಷ್ಟ್ರೀಯ ಶಿಕ್ಷಣ ದಿನಾಚರಣೆ ಹಾಗೂ ಪ್ರಥಮ ಶಿಕ್ಷಣ ಮಂತ್ರಿ ಮೌಲಾನಾ ಅಬುಲ್ ಕಲಾಂ ಆಜಾದ್ ಜನ್ಮ ದಿನದ ಹಿನ್ನೆಲೆ, ನಾಳೆ ಬೆಳಗ್ಗೆ 11 ಗಂಟೆಗೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಶತಮಾನೋತ್ಸವ ಸಂಭ್ರಮ ಉದ್ಘಾಟಿಸಲಿದ್ದಾರೆ.

<><><>

<><><>

ಮೈಸೂರಿನ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಸಂಗ್ರಹಿಸಿರುವ, ಕೌಟಿಲ್ಯನ 'ಅರ್ಥಶಾಸ್ತ್ರ'ದ ಪ್ರಾಚೀನ ತಾಳೆಗರಿ ಹಸ್ತಪ್ರತಿಗೆ, ಜಾಗತಿಕ ಮಾನ್ಯತೆ ದೊರೆತಿದೆ. *'ಯುನೆಸ್ಕೋ ಮೆಮೋರಿ ಆಫ್ ದಿ ವರ್ಲ್ಡ್ – ಏಷ್ಯನ್ ಆಂಡ್ ದಿ ಪ್ಯಾಸಿಫಿಕ್ ರೀಜಿನಲ್ ರಿಜಿಸ್ಟ್ರೇಷನ್'* ಗೆ ಈ ಅಮೂಲ್ಯ ಹಸ್ತಪ್ರತಿಗಳನ್ನು ಸೇರ್ಪಡೆಗೊಳಿಸಲಾಗಿದೆ. ಇಂಡೋನೇಷ್ಯಾದಲ್ಲಿ ನಡೆದ, *'ಮೆಮೋರಿ ಆಫ್ ವರ್ಲ್ಡ್ ಕಮಿಟಿ ಫಾರ್ ಏಷ್ಯಾ ದಿ ಪ್ಯಾಸಿಫಿಕ್'* 11ನೇ ಅಧಿವೇಶನದಲ್ಲಿ, ಈ ನಿರ್ಧಾರ ಕೈಗೊಳ್ಳಲಾಗಿದೆ. ಕಳೆದ 5ನೇ ತಾರೀಖಿನಂದು, ಯನೆಸ್ಕೋ ಅಧಿಕೃತ ಪ್ರಮಾಣಪತ್ರ ಪ್ರಕಟಿಸಿದೆ.

<><><>

ಸೆನೆಗಲ್‌ನ ಡಾಕರ್‌ನಲ್ಲಿ ಆಯೋಜಿತ, ಯೂತ್ ಒಲಿಂಪಿಕ್ಸ್‌ನಲ್ಲಿ, 2 ಪದಕ ಗೆದ್ದ, ಕರ್ನಾಟಕದ ಈಜುಪಟು ಧೀನಿಧಿ ದೇಸಿಂಗು, ನಿನ್ನೆ ಬೆಂಗಳೂರಿಗೆ ಬಂದಿಳಿದಿದ್ದು, ಕರ್ನಾಟಕ ರಾಜ್ಯ ಈಜು ಸಂಸ್ಥೆ ಭವ್ಯ ಸ್ವಾಗತ ಕೋರಿತು.

<><><>

ಕರ್ನಾಟಕದ ಉದಯೋನ್ಮುಖ ಕ್ರಿಕೆಟ್ ಪಟು, ಉಮಾ ಕಶ್ವಿ ಭಾರತ ಬಿ ಕ್ರಿಕೆಟ್ ತಂಡದ, ನಾಯಕಿಯಾಗಿ ಆಯ್ಕೆಯಾಗಿದ್ದಾರೆ. 19 ವರ್ಷದೊಳಗಿನ, ಮಹಿಳೆಯರ, ಭಾರತ ಎ, ಭಾರತ ಬಿ ಮತ್ತು ನೇಪಾಳ ತಂಡಗಳ ನಡುವಿನ ಟಿ–20 ತ್ರಿಕೋನ ಸರಣಿ, ಇಂದಿನಿಂದ ಬೆಂಗಳೂರು ಹೊರ ವಲಯದ, ಬಿ.ಸಿ.ಸಿ.ಐ. ಶ್ರೇಷ್ಠತಾ ಕೇಂದ್ರದಲ್ಲಿ, ನಡೆಯಲಿವೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.